ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು

JSS MAHAVIDYAPEETHA, MYSURU


# ಜೆಎಸ್‌ಎಸ್ ವಾರ್ತಾಪತ್ರ

## ಮಾಸಪತ್ರಿಕೆ

# JSS VARTHAPATHRA

*Monthly Magazine*

ಸಂಪುಟ 7 ಸಂಚಿಕೆ 10 ಅಕ್ಟೋಬರ್ 2022



ಮೈಸೂರಿನ ಸುತ್ತೂರು ಶ್ರೀಮಠಕ್ಕೆ ವಿಜಯದಶಮಿಯಂದು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿಯವರು ಧರ್ಮಪತ್ನಿ ಶ್ರೀಮತಿ ಚೆನ್ನಮ್ಮ ಬೊಮ್ಮಾಯಿಯವರೊಂದಿಗೆ ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ಆಶೀರ್ವಾದ ಪಡೆದರು. ಶಾಸಕರುಗಳಾದ ಶ್ರೀ ಎನ್. ಮಹೇಶ್, ಶ್ರೀ ಎಲ್. ನಾಗೇಂದ್ರ, ಶ್ರೀ ಜಿ.ಟಿ. ದೇವೇಗೌಡ, ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್ ಮತ್ತು ಶ್ರೀ ಕಾ.ಪು. ಸಿದ್ಧಲಿಂಗಸ್ವಾಮಿ ಮೊದಲಾದವರುಗಳಿದ್ದಾರೆ (5 ಅಕ್ಟೋಬರ್ 2022)




ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜಿನ 14ನೇ ಪದವೀಧರರ ದಿನಾಚರಣೆಯಲ್ಲಿ ರ‍್ಯಾಂಕ್ ಪಡೆದ ಪದವೀಧರರೊಂದಿಗೆ ಡಾ. ಶಿವಾನಂದ ಭಾರತಿ, ಪ್ರೊ. ಕೆ.ಎಸ್. ಸುರೇಶ್, ಗೌ.ನ್ಯಾ. ಶ್ರೀ ಎ.ಎಸ್. ಬೋಪಣ್ಣ, ಗೌ.ನ್ಯಾ. ಶ್ರೀ ಪಿ.ಎಸ್. ದಿನೇಶ್ ಕುಮಾರ್, ಡಾ. ಸಿ.ಜಿ. ಬೆಟಸೂರಮಠ ಹಾಗೂ ಡಾ. ಎಸ್. ನಟರಾಜು ಅವರುಗಳು (1 ಅಕ್ಟೋಬರ್ 2022)




ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಫ್ರಾನ್ಸ್ ದೇಶದ ಡಸಾಲ್ಟ್ ಸಿಸ್ಟಮ್ಸ್ ಸಹಯೋಗದಲ್ಲಿ 3ಡಿ ಎಕ್ಸ್‌ಪೀರಿಯನ್ಸ್ ನಾವೀನ್ಯತಾ ಕೇಂದ್ರದ ಸ್ಥಾಪನೆಗೆ ಒಡಂಬಡಿಕೆ ಮಾಡಿಕೊಳ್ಳಲಾಯಿತು. ಡಾ. ಎಚ್.ಆರ್. ಮಹದೇವಸ್ವಾಮಿ, ಪ್ರೊ. ಎಂ.ಎಚ್. ಧನಂಜಯ, ಶ್ರೀ ಎನ್.ಜಿ. ದೀಪಕ್, ಡಾ. ಸಿ.ಜಿ. ಬೆಟಸೂರಮಠ, ಡಾ. ಬಿ. ಸುರೇಶ್, ಡಾ. ಎ.ಎನ್. ಸಂತೋಷ್‌ಕುಮಾರ್‌ರವರುಗಳಿದ್ದಾರೆ (28 ಸೆಪ್ಟೆಂಬರ್ 2022)

## ಯುವ ವಕೀಲರು ಸದಾ ಅಧ್ಯಯನಶೀಲರಾಗಿರಬೇಕು

ಯುವ ವಕೀಲರು ಸದಾ ಅಧ್ಯಯನಶೀಲರಾಗಿರಬೇಕು ಎಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಾದ ಗೌ.ನ್ಯಾ. ಶ್ರೀ ಎ.ಎಸ್. ಬೋಪಣ್ಣರವರು ಹೇಳಿದರು.

**ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ** ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ದಿನಾಂಕ 1.10.2022ರಂದು ನಡೆದ 14ನೇ ಪದವೀಧರರ ದಿನಾಚರಣೆಯಲ್ಲಿ ಮಾತನಾಡಿದ ಅವರು ಬದಲಾಗುತ್ತಿರುವ ಜಗತ್ತಿನಲ್ಲಿ ಯುವ ವಕೀಲರು ತುಂಬ ಆಧ್ಯಯನಶೀಲರಾಗಬೇಕು. ಸಾರ್ವಜನಿಕ ವಲಯದಲ್ಲಿ ಶಿಸ್ತು, ಸಂಯಮ, ವೃತ್ತಿಗೌರವ, ಪ್ರಾಮಾಣಿಕತೆಯೊಂದಿಗೆ ಕಕ್ಷಿದಾರರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಗಮನ ಹರಿಸಬೇಕು. ಕಾನೂನು ಅಧ್ಯಯನ ನಡೆಸುತ್ತಿರುವ ವಿದ್ಯಾರ್ಥಿಗಳು ಅಧ್ಯಯನಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಸುತ್ತೂರು ಮಠದ ವತಿಯಿಂದ ಸ್ಥಾಪಿತವಾಗಿರುವ ಈ ಕಾನೂನು ಕಾಲೇಜು ಮತ್ತು ಇತರ ಶಿಕ್ಷಣ ಸಂಸ್ಥೆಗಳಲ್ಲೂ ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡುತ್ತಿರುವ ಅಂಶ ಈ ಸಮಾರಂಭದಿಂದ ತಿಳಿದುಬರುತ್ತದೆ ಎಂದರು.

ಹೈಕೋರ್ಟ್ ನ್ಯಾಯಮೂರ್ತಿಗಳಾದ ಗೌ. ನ್ಯಾ. ಶ್ರೀ ಪಿ.ಎಸ್. ದಿನೇಶ್ ಕುಮಾರ್ ಮಾತನಾಡಿದರು. ಪ್ರಶಸ್ತಿ ಪುರಸ್ಕೃತ ಪದವೀಧರರು ಹಾಗೂ ಪದವಿ ಪೂರೈಸಿದವರುಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು. ಡಾ. ಸಿ.ಜಿ. ಬೆಟಸೂರಮಠ ಪ್ರತಿಜ್ಞಾವಿಧಿ ಬೋಧಿಸಿದರು. ಪ್ರೊ. ಕೆ.ಎಸ್. ಸುರೇಶ್ ಸ್ವಾಗತಿಸಿದರು. ಕು. ವಿದ್ಯಾ ಪಿ. ಹೆಗ್ಡೆ ಪ್ರಾರ್ಥಿಸಿದರು. ಡಾ. ಎಸ್. ನಟರಾಜು ವಂದಿಸಿದರು. ಡಾ. ಶಿವಾನಂದ ಭಾರತಿ ಉಪಸ್ಥಿತರಿದ್ದರು. ಶ್ರೀ ಎ.ಟಿ. ಜಗದೀಶ್ ಕಾರ್ಯಕ್ರಮ ನಿರೂಪಿಸಿದರು.

## 3ಡಿ ಎಕ್ಸ್‌ಪೀರಿಯೆನ್ಸ್ ನಾವೀನ್ಯತಾ ಕೇಂದ್ರದ ಸ್ಥಾಪನೆಗೆ ಒಡಂಬಡಿಕೆ

ಭಾರತದಲ್ಲಿ ವಿದ್ಯುತ್ ವಾಹನ ಮತ್ತು ಭವಿಷ್ಯದಲ್ಲಿ ಮೊಬಿಲಿಟಿ ಕ್ಷೇತ್ರದಲ್ಲಿ ಸಮರ್ಥ ಕಾರ್ಯಪಡೆಯನ್ನು ರೂಪಿಸುವ ಸಲುವಾಗಿ **ಜೆಎಸ್‌ಎಸ್ ಮಹಾವಿದ್ಯಾಪೀಠ** ಹಾಗೂ ಫ್ರಾನ್ಸ್ ದೇಶದ ಡಸಾಲ್ಟ್ ಸಿಸ್ಟಮೆಸ್ ಸಹಯೋಗದಲ್ಲಿ '3ಡಿ ಎಕ್ಸ್‌ಪೀರಿಯನ್ಸ್ ನಾವೀನ್ಯತಾ ಕೇಂದ್ರ'ದ ಸ್ಥಾಪನೆಯ ಒಡಂಬಡಿಕೆಗೆ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ದಿನಾಂಕ 28.9.2022ರಂದು ಸಹಿ ಹಾಕಲಾಯಿತು.

ಪರಮಪೂಜ್ಯ ಜಗದ್ಗುರುಗಳವರು '3ಡಿ ಎಕ್ಸ್‌ಪೀರಿಯನ್ಸ್ ನಾವೀನ್ಯತಾ ಕೇಂದ್ರದ ಸ್ಥಾಪನೆಗಾಗಿ ಮಾಡಿಕೊಂಡಿರುವ ಒಡಂಬಡಿಕೆಯು ಮುಂದಿನ ಪೀಳಿಗೆಯು ಭವಿಷ್ಯದಲ್ಲಿ ಬೆಳೆಯಲು ಮತ್ತು ಜವಾಬ್ದಾರಿಯುತ ನಾಗರಿಕರಾಗಿ ಮುಂದುವರಿಯಲು ಬೆಂಬಲವಾಗಿ ನಿಲ್ಲುತ್ತದೆ. ಸುಸ್ಥಿರ ವಾತಾವರಣವನ್ನು ನಿರ್ಮಿಸಲು ದಾರಿ ಮಾಡಿಕೊಡುತ್ತದೆ. ಈ ಕೇಂದ್ರವು ವಾಯುಮಾಲಿನ್ಯವನ್ನು ಕಡಿಮೆ ಮಾಡಿ, ಹಸಿರು ಪರಿಸರದತ್ತ ಸಾಗಲು ಸಹಾಯ ಮಾಡುತ್ತದೆ ಎಂದು ತಿಳಿಸಿದರು.

ಡಸಾಲ್ಟ್ ಸಿಸ್ಟಮ್ಸ್ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎನ್.ಜಿ. ದೀಪಕ್‌ರವರು ಈ ನಾವೀನ್ಯತಾ ಕೇಂದ್ರವು ಭವಿಷ್ಯದ ಡಿಜಿಟಲ್ ಆರ್ಥಿಕತೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಅಗತ್ಯವಾದ ಕೌಶಲ್ಯವನ್ನು ಅಭಿವೃದ್ಧಿಪಡಿಸುವುದಲ್ಲದೆ ಹೊಸ ತಂತ್ರಜ್ಞಾನ ಮತ್ತು ಉತ್ಪನ್ನದ ಆವಿಷ್ಕಾರವನ್ನು ಬೆಂಬಲಿಸುವಲ್ಲಿ ಬಹು ಮುಖ್ಯವಾದ ಪಾತ್ರ ವಹಿಸುತ್ತದೆ ಎಂದು ಹೇಳಿದರು.

ಸಲಹೆಗಾರರಾದ ಪ್ರೊ. ಎಂ.ಎಚ್. ಧನಂಜಯ ಒಡಂಬಡಿಕೆಯ ಕುರಿತು ತಿಳಿಸಿದರು. ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ಮತ್ತು ನಿರ್ದೇಶಕರಾದ ಡಾ. ಬಿ. ಸುರೇಶ್ ಮಾತನಾಡಿದರು. ಜಂಟಿ ನಿರ್ದೇಶಕರಾದ ಡಾ. ಎಚ್.ಆರ್. ಮಹದೇವಸ್ವಾಮಿ ಸ್ವಾಗತಿಸಿದರು. ಕುಲಪತಿಗಳಾದ ಡಾ. ಎ.ಎನ್. ಸಂತೋಷಕುಮಾರ್, ಪ್ರಾಂಶುಪಾಲರಾದ ಡಾ. ಎಸ್.ಬಿ. ಕಿವಡೆ ಮೊದಲಾದವರು ಉಪಸ್ಥಿತರಿದ್ದರು. ಡಾ. ಭೀಮಸೇನ್ ಸೊರಗಾಂವ್ ವಂದಿಸಿದರು.

## ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಗಾಂಧಿ ಶಿಲ್ಪ ಬಜಾರ್



**ಮೈಸೂರಿನ ಜೆಎಸ್‌ಎಸ್ ಅರ್ಬನ್ ಹಾತ್**ನಲ್ಲಿ ಸೆಪ್ಟೆಂಬರ್ 16ರಿಂದ 25ರವರೆಗೆ ಭಾರತ ಸರ್ಕಾರದ ಜವಳಿ ಮಂತ್ರಾಲಯದ ಸಹಯೋಗದೊಂದಿಗೆ ಗಾಂಧಿ ಶಿಲ್ಪ ಬಜಾರನ್ನು ಆಯೋಜಿಸಲಾಗಿತ್ತು. ಭಾರತ ಸರ್ಕಾರದ ಜವಳಿ ಮಂತ್ರಾಲಯದ ಸಹಾಯಕ ಕಾರ್ಯದರ್ಶಿಗಳಾದ ಶ್ರೀಮತಿ ನಿಧಿ ಬನ್ಸಾಲ್ ವಸ್ತುಪ್ರದರ್ಶವನ್ನು ಉದ್ಘಾಟಿಸಿದರು.

ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿ ವಿಜೇತರು ಸೇರಿದಂತೆ ಸುಮಾರು 100 ಮಂದಿ ಕುಶಲಕರ್ಮಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಮರದ ಕೆತ್ತನೆ, ಶಿಲಾ ಶಿಲ್ಪ, ಕಂಚಿನ ವಿಗ್ರಹಗಳು, ಮರದ ಕುಂದಣ ಕಲೆ, ಟರ್‍ರಾ ಕೊಟ್ಟ, ಪೇಪರ್ ಮೆಷೀ, ರತ್ನ ಕಂಬಳಿ, ಹತ್ತಿ ಜಮಕಾನ, ಅನುಕರಣೆ ಆಭರಣಗಳು, ಮರದ ಅರಗಿನ ಕಲಾವಸ್ತುಗಳು, ಬಾಟಿಕ್, ಕಲಾಂಕರಿ ಚಿತ್ರಕಲೆ, ತಂಜಾವೂರು–ಮೈಸೂರು ಶೈಲಿಯ ಚಿತ್ರಕಲೆ, ಕಲಾತ್ಮಕ ಚರ್ಮದ ಚಪ್ಪಲಿಗಳು, ಮಣ್ಣಿನ ಗೊಂಬೆಗಳು, ಕಛ್ ಪ್ರದೇಶದ ಕಸೂತಿ, ಛತ್ತೀಸ್‌ಗಡದ ದ್ರೊಕ್ರಾ ಎರಕದ ವಸ್ತುಗಳು, ಚಂದೇರಿ–ಪಟೋಲ ಸೀರೆಗಳು, ಪಟ ಚಿತ್ರ, ಬೆಳ್ಳಿಯ ಸೂಕ್ಷ್ಮ ವಿನ್ಯಾಸ ವಸ್ತುಗಳು, ಶೀತಲ ಪಟ್ಟಿ, ಬಿದಿರು–ಬೆತ್ತದ ವಸ್ತುಗಳು, ಪೂರ್ವೋತ್ತರದ ಅಲಂಕಾರಿಕ ಒಣ ಹೂಗಳು, ಉತ್ತರ ಪ್ರದೇಶದ ಕಲಾತ್ಮಕ ಲೋಹದ ವಸ್ತುಗಳು, ಕಲಾತ್ಮಕ ಕಲ್ಲಿನ ವಸ್ತುಗಳು, ಮುದ್ರಿತ ಜವಳಿ, ಬಿಹಾರದ ಮಧುಬನಿ ಚಿತ್ರಕಲೆ, ಅರಗಿನ ಬಳೆಗಳು ಹಾಗೂ ಇನ್ನಿತರ ಕಲಾತ್ಮಕ ವಸ್ತುಗಳು ಪ್ರದರ್ಶನ ಹಾಗೂ ಮಾರಾಟಕ್ಕೆ ಲಭ್ಯವಿದ್ದವು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ, ನಿರ್ದೇಶಕರುಗಳಾದ ಪ್ರೊ. ಮೊರಬದ ಮಲ್ಲಿಕಾರ್ಜುನ, ಶ್ರೀ ಎಸ್. ಪುಟ್ಟಸುಬ್ಬಪ್ಪ, ಶ್ರೀ ರೇವಣ್ಣಸ್ವಾಮಿ, ಶ್ರೀ ಶಂಕರಪ್ಪ, ಡಾ. ಎಚ್.ಆರ್. ಮಹದೇವಸ್ವಾಮಿ, ಜವಳಿ ಮಂತ್ರಾಲಯದ ಸಹಾಯಕ ನಿರ್ದೇಶಕರಾದ ಶ್ರೀ ಸುನೀಲ್ ಕುಮಾರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು

# ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಲ್ಲಿ ರಾಜೇಂದ್ರ ಶ್ರೀಗಳವರ 107ನೆಯ ಜಯಂತಿ ಮಹೋತ್ಸವ

## ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಮೈಸೂರು



ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯ ಆವರಣದಲ್ಲಿ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೆಯ ಜಯಂತ್ಯುತ್ಸವವನ್ನು ಜೆಎಸ್‌ಎಸ್ ಎಹೆಚ್‌ಇಆರ್‌ನ ಸಮಕುಲಾಧಿಪತಿ ಡಾ. ಬಿ. ಸುರೇಶ್‌ರವರು ಉದ್ಘಾಟಿಸುತ್ತಿರುವುದು

ಪರಮಪೂಜ್ಯ ಜಗದ್ಗುರು ರಾಜಗುರುತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೆಯ ಜಯಂತ್ಯುತ್ಸವವನ್ನು ದಿನಾಂಕ 12.9.2022 ರಂದು **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯ** ಆವರಣದಲ್ಲಿ ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಜೆಎಸ್‌ಎಸ್ ಎಹೆಚ್‌ಇಆರ್‌ನ ಸಮಕುಲಾಧಿಪತಿಗಳಾದ ಡಾ. ಬಿ. ಸುರೇಶ್‌ರವರು ಮಾತನಾಡುತ್ತ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಆದರ್ಶ ಮೌಲ್ಯಯುತ ಜೀವನ, ಸೇವಾತತ್ಪರತೆ ಹಾಗೂ ಸಾಮಾಜಿಕ ಕಳಕಳಿ ಆದರಣೀಯವಾದುದು. ಇಂದಿನ ಯುವಜನತೆ ಮಹಾ ಪುರುಷರ ನಾಯಕತ್ವ ಗುಣಗಳು, ತಾಳ್ಮೆ, ದೂರದರ್ಶಿತ್ವ ಹಾಗೂ ವಿವೇಕಯುತ ನಿರ್ಧಾರಗಳನ್ನು ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಹಿರಿಯ ವೈದ್ಯರು ಹಾಗೂ ಪ್ರಾಧ್ಯಾಪಕರಾದ ಡಾ. ಬಿ. ಗುರುಬಸವರಾಜರವರು ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಬಡವರ, ದೀನ ದಲಿತರ ಹಾಗೂ ಆರ್ಥಿಕವಾಗಿ ಹಿಂದುಳಿದ ಎಲ್ಲ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಜೊತೆಗೆ ಊಟ, ವಸತಿ, ಆಶ್ರಯ ಕೊಟ್ಟು ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಕಾರಣೀಭೂತರಾದರೆಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಸರ್ಬೇಸ್ವರ್ ಕರ್‌ರವರು ರಾಜೇಂದ್ರ ಮಹಾಸ್ವಾಮಿಗಳ ತತ್ವಾದರ್ಶಗಳನ್ನು ಎಲ್ಲರೂ ಅಳವಡಿಸಿಕೊಳ್ಳಬೇಕು. ಜೆಎಸ್‌ಎಸ್ ಸಂಸ್ಥೆಯ ಇಂದಿನ ಶೈಕ್ಷಣಿಕ, ಸಾಮಾಜಿಕ ಹಾಗೂ ಧಾರ್ಮಿಕ ಉನ್ನತಿಗೆ ಶ್ರೀಗಳೇ ಮೂಲ ಪ್ರೇರಣೆ, ಅವರ ಕರ್ತೃತ್ವಶಕ್ತಿಯೇ ಕಾರಣವೆಂದು ಹೇಳಿದರು.

ಈ ಸಂದರ್ಭದಲ್ಲಿ ಕಾಲೇಜಿನ ಸ್ವಸ್ಥವೃತ್ತ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾದ ಡಾ. ಪಿ. ಸುಧಾಕರ್ ರೆಡ್ಡಿ ಹಾಗೂ ಡಾ. ಬೀನಾರವರು ರಚಿಸಿರುವ ಸ್ವಸ್ಥವೃತ್ತ ಪಠ್ಯಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಲೇಖಕರಾದ ಡಾ. ಪಿ. ಸುಧಾಕರ್ ರೆಡ್ಡಿ ಮಾತನಾಡಿ ಪೂರ್ವ, ಪ್ರಸ್ತುತ

ಹಾಗೂ ಮುಂದಿನ ಕಾಲಘಟ್ಟದ ಜೀವನ ಶೈಲಿಗಳು, ರೋಗಗಳು ಪ್ರತಿಬಂಧಕೋಪಾಯಗಳು, ಆಹಾರ, ಸಾಂಕ್ರಾಮಿಕ ರೋಗಗಳು ಹಾಗೂ ಅವುಗಳ ಚಿಕಿತ್ಸೆ ಅಲ್ಲದೆ ಸ್ವಚ್ಛ ಭಾರತ್ ಮಿಷನ್, ನೀತಿ ಆಯೋಗ ಹಾಗೂ ಕೋವಿಡ್–19ನಂತಹ ವಿಷಯಗಳನ್ನು ಸಮಗ್ರವಾಗಿ ಒಟ್ಟುಗೂಡಿಸಿ ಈ ಪಠ್ಯವನ್ನು ರಚಿಸಲಾಗಿದೆ. ಇದು ಪದವಿ ಹಾಗೂ ಸ್ನಾತಕೋತ್ತರ ಆಯುರ್ವೇದ ವಿದ್ಯಾರ್ಥಿಗಳಿಗೆ ಅತ್ಯಂತ ಅಧ್ಯಯನಯೋಗ್ಯ ಪುಸ್ತಕವಾಗಿದೆಯೆಂದು ತಿಳಿಸಿದರು.

ಕು. ಭೂಮಿಕಾ ಹೆಗಡೆಯವರು ಪುಷ್ಪಾಂಜಲಿ ಮಾಡಿದರು. ಕು. ಸುಮೇಧಾ ಭಟ್ ಮತ್ತು ತಂಡದವರು ಪ್ರಾರ್ಥನೆ ಸಲ್ಲಿಸಿದರು. ಡೀನ್‌ರಾದ ಡಾ. ರಾಜೇಶ್ ಅ. ಉದಪುಡಿ ಸ್ವಾಗತ ಕೋರಿದರು.

ಜಯಂತ್ಯುತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ವಿವಿಧ ಶೈಕ್ಷಣಿಕ, ಸಾಂಸ್ಕೃತಿಕ ಸ್ಪರ್ಧೆಗಳು ಹಾಗೂ ವಿಚಾರ ಸಂಕಿರಣಗಳ ಕುರಿತು ಕಾಲೇಜಿನ ಪ್ರಾಧ್ಯಾಪಕರಾದ ಡಾ. ದೀಪಾ ಸಿ. ಪಾಟೀಲ್ ವರದಿಯನ್ನು ಮಂಡಿಸಿದರು. ಇದೇ ಸಂದರ್ಭದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ, ಪ್ರಶಸ್ತಿ ಪತ್ರಗಳನ್ನು ನೀಡಲಾಯಿತು. ಸಹಪ್ರಾಧ್ಯಾಪಕರಾದ ಡಾ. ಸಂಧ್ಯಾರಾಣಿಯವರು ವಂದಿಸಿದರು. ಸಹಪ್ರಾಧ್ಯಾಪಕರಾದ ಡಾ. ಪಿ.ಪಿ. ಅಯ್ಯಣ್ಣ ಕಾರ್ಯಕ್ರಮ ನಿರೂಪಿಸಿದರು.

## ಜೆಎಸ್‌ಎಸ್ ಪ್ರೌಢಶಾಲೆ, ಲಕ್ಷ್ಮೀಪುರಂ, ಮೈಸೂರು




ಲಕ್ಷ್ಮೀಪುರಂ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ಏರ್ಪಡಿಸಿದ್ದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿ ಕಾರ್ಯಕ್ರಮದಲ್ಲಿ ಶ್ರೀ ಮ.ಗು. ಸದಾನಂದಯ್ಯನವರು ಮಾತನಾಡುತ್ತಿರುವುದು

"ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ತ್ರಿವಿಧದಾಸೋಹದ ಹರಿಕಾರರಾಗಿದ್ದರು" ಎಂದು ಶರಣ ಸಾಹಿತ್ಯ ಪರಿಷತ್ತಿನ ಮೈಸೂರು ನಗರ ಘಟಕದ ಅಧ್ಯಕ್ಷರಾದ ಶ್ರೀ ಮ.ಗು. ಸದಾನಂದಯ್ಯನವರು ಹೇಳಿದರು.

**ಲಕ್ಷ್ಮೀಪುರಂ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ** ದಿನಾಂಕ 8.9.2022ರಂದು ಪರಮಪೂಜ್ಯರ 107ನೇ ಜಯಂತಿ ಕಾರ್ಯಕ್ರಮದಲ್ಲಿ ನುಡಿನಮನ ಸಲ್ಲಿಸಿ ಮಾತನಾಡುತ್ತಾ "ರಾಜೇಂದ್ರ ಶ್ರೀಗಳವರು ಬಡ ವಿದ್ಯಾರ್ಥಿಗಳಿಗೆ ಜ್ಞಾನ, ಅನ್ನ, ವಸತಿಯನ್ನು ನೀಡಿ ತ್ರಿವಿಧದಾಸೋಹಿಗಳಾಗಿದ್ದರು.

ಸಮಾಜದ ಉದ್ಧಾರಕ್ಕಾಗಿ ಅಹರ್ನಿಶಿ ದುಡಿದರು" ಎಂದು ತಿಳಿಸಿದರು.

ಪಡುವಲು ಶ್ರೀ ವಿರಕ್ತಮಠದ ನಿ.ಪ್ರ.ಸ್ವ. ಶ್ರೀ ಮಹಾದೇವಸ್ವಾಮಿಗಳವರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಲಕ್ಷಾಂತರ ಜನರ ಬಾಳಿಗೆ ಬೆಳಕಾದವರು, ಕರುಣಾಮಯಿಗಳು. ಶ್ರೀಗಳವರು ನಡೆಗೂ ಮತ್ತು ನುಡಿಗೂ ಸಾಮ್ಯತೆ ಇಟ್ಟುಕೊಂಡು ಬದುಕಿದವರು. ಸಾಧನೆಯ ಮಾರ್ಗದಲ್ಲಿ ನಡೆಯಬೇಕಾದರೆ ಶ್ರೀಗಳವರ ತತ್ವವನ್ನು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಬಿ.ಎ. ರಾಜಶೇಖರರವರು ರಾಜೇಂದ್ರ ಶ್ರೀಗಳವರು ಸಮಾಜದ ಎಲ್ಲಾ ಜನರು ಒಪ್ಪುವ ಒಬ್ಬ ಆದರ್ಶ ವ್ಯಕ್ತಿಯಾಗಿದ್ದರು. ಶ್ರೀಗಳವರ ಸರಳತೆ, ವ್ಯಕ್ತಿತ್ವ ಎಲ್ಲರಿಗೂ ಮಾದರಿಯಾಗಿದ್ದು, ವಿದ್ಯಾರ್ಥಿದೆಸೆಯಿಂದಲೇ ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ವಿಷಯ ಪರಿವೀಕ್ಷಕರಾದ ಶ್ರೀ ಎಸ್.ಸಿ. ಚೆನ್ನಬಸಪ್ಪನವರು ಮಾತನಾಡುತ್ತಾ, ಶ್ರೀಗಳವರ ಆಶಯವನ್ನು ಈಡೇರಿಸುವ ಗುರಿಯಿಟ್ಟುಕೊಂಡು ಉತ್ತಮ ಪ್ರಜೆಗಳಾಗಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಕಳೆದ ಸಾಲಿನ 10ನೇ ತರಗತಿಯಲ್ಲಿ ಉತ್ತಮ ಅಂಕ ಗಳಿಸಿದ ಶಾಲೆಯ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಸಹ ಶಿಕ್ಷಕರಾದ ಶ್ರೀ ಶಿವಸ್ವಾಮಿಯವರು ಪ್ರತಿಜ್ಞಾವಿಧಿಯನ್ನು ಬೋಧಿಸಿದರು. ಜಿ. ಶಶಿಧರ ಮತ್ತು ತಂಡದವರು ಪ್ರಾರ್ಥಿಸಿದರು. ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಎಂ.ಸಿ. ದೇವರಾಜುರವರು ಸ್ವಾಗತಿಸಿದರು. ಕು. ಗುಣಶ್ರೀ ವಂದಿಸಿದರು. ಜಿ. ವಿನಯ್ ಕಾರ್ಯಕ್ರಮ ನಿರೂಪಿಸಿದರು. □

## ಜೆಎಸ್‌ಎಸ್ ಪದವಿಪೂರ್ವ ಕಾಲೇಜು, ರಾಮಾಪುರ

**ರಾಮಾಪುರದ ಜೆಎಸ್‌ಎಸ್ ಶಿಕ್ಷಣ ಸಮುಚ್ಚಯದಲ್ಲಿ** ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೆಯ ಜಯಂತಿ ಮಹೋತ್ಸವವನ್ನು ದಿನಾಂಕ 6.9.2022ರಂದು ಆಚರಿಸಲಾಯಿತು.

ಶ್ರೀ ಮಲೆ ಮಹದೇಶ್ವರ ಬೆಟ್ಟದ ಶ್ರೀ ಸಾಲೂರು ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳವರು ಕಾರ್ಯಕ್ರಮ ಉದ್ಘಾಟಿಸಿ ಜಾತಿ, ಧರ್ಮ, ಜನಾಂಗಗಳನ್ನು ಮೀರಿ ಮಾನವ ಸೇವೆಯನ್ನು ಮಾಡಿದವರೆಂದರೆ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು. ಜೆಎಸ್‌ಎಸ್ ಶಿಕ್ಷಣಸಂಸ್ಥೆಗಳು ಒಳ್ಳೆಯ ಶಿಕ್ಷಣ ಮತ್ತು ಸಂಸ್ಕಾರ ನೀಡುತ್ತಿವೆ. ಶ್ರೀ ಶಿವರಾತ್ರಿ ರಾಜೆಂದ್ರ ಮಹಾಸ್ವಾಮಿಗಳವರ ಇತಿಹಾಸವನ್ನು ದಿನದಲ್ಲಿ ಕೆಲವು ನಿಮಿಷವಾದರೂ ಚಿಂತನ ಮಾಡಿ ಅವರ ಆದರ್ಶಗಳನ್ನು ರೂಢಿಸಿಕೊಳ್ಳಿ ಎಂದು ಹೇಳಿದರು.

ರಾಮಾಪುರ ಮಠದ ಶ್ರೀ ಬಸವಣ್ಣ ಸ್ವಾಮಿಗಳವರು ಮಾತನಾಡಿ ಕಾಯಕವಿಲ್ಲದೆ ದಾಸೋಹವಿಲ್ಲ, ಕಾಯಕವಿಲ್ಲದೆ ಏಳಿಗೆಯಿಲ್ಲ ಎಂದು ತಿಳಿದಿದ್ದ ಶ್ರೀಗಳು ಕಗ್ಗತ್ತಲಾಗಿದ್ದ ರಾಮಾಪುರ ಭಾಗದ ವಿದ್ಯಾರ್ಥಿಗಳಿಗೆ ವಿದ್ಯಾಸಂಸ್ಥೆ ಮತ್ತು ವಿದ್ಯಾರ್ಥಿನಿಲಯ ಸ್ಥಾಪಿಸಿ ಎಲ್ಲರಿಗೂ ಜ್ಞಾನಾರ್ಜನೆಯನ್ನು ನೀಡಿ ಬೆಳಕಾದರು ಎಂದು ತಿಳಿಸಿದರು.

ರಾಮಾಪುರದ ಗುರುಮಲ್ಲೇಶ್ವರ ಮಠದ ಶ್ರೀ ಸೋಮಶೇಖರ ಸ್ವಾಮಿಗಳವರು ಮಾತನಾಡಿ 'ಜ್ಞಾನವಿಲ್ಲದ ಬಳಿಕ ಏನಿದ್ದು ಫಲವೇನು' ಎಂಬಂತೆ ಶ್ರೀಗಳು ಜ್ಞಾನವನ್ನು ಈ ಭಾಗದ ಜನರಿಗೆ ನೀಡಿ ಬೆಳೆಸಿದರು, ಅದರ ಫಲವಾಗಿ ಇಂದು ಈ ಭಾಗದ ಜನ ಉನ್ನತ ಸ್ಥಾನಗಳಲ್ಲಿದ್ದಾರೆ ಎಂದು ತಿಳಿಸಿದರು.

ಕನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಹಾಯಕ ಕನ್ನಡ ಪ್ರಾಧ್ಯಾಪಕ ಡಾ. ಪಿ. ಮಣಿಯವರು ದುಡಿಮೆ, ಶ್ರಮ, ಸೇವೆ ಮಾಡದೆ ಸಾಧನೆ ಇಲ್ಲ, ಇವೆಲ್ಲವನ್ನೂ ರೂಢಿಸಿಕೊಂಡು ತಪಸ್ಸಿನಂತೆ ಸಾಧನೆ



ರಾಮಾಪುರದ ಜೆಎಸ್‌ಎಸ್ ಶಿಕ್ಷಣ ಸಮುಚ್ಚಯದಲ್ಲಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೆಯ ಜಯಂತಿ ಮಹೋತ್ಸವವನ್ನು ಸಾಲೂರು ಮಠದ ಶ್ರೀಗಳು, ರಾಮಾಪುರ ಮಠದ ಪೂಜ್ಯದ್ವಯರು, ಸಹಾಯಕ ಪ್ರಾಧ್ಯಾಪಕರಾದ ಡಾ. ಮಣಿ ಮತ್ತು ಸಮುಚ್ಚಯದ ಮುಖ್ಯಸ್ಥರುಗಳು ಉದ್ಘಾಟಿಸುತ್ತಿರುವುದು.

ಮಾಡಿದವರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಎಂದು ಬಣ್ಣಿಸಿದರು.

ಸಮುಚ್ಚಯದ ಮುಖ್ಯಸ್ಥರಾದ ಶ್ರೀ ಗಿರಿಯಣ್ಣನವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಕು. ಡಿ. ಮಮತ ಸ್ವಾಗತಿಸಿದರು. ಶ್ರೀ ಕುಮಾರಸ್ವಾಮಿ ವಂದಿಸಿದರು. ಶ್ರೀ ಶಿವಕುಮಾರ ನಿರೂಪಿಸಿದರು. ಬೋಧಕರು, ಬೋಧಕೇತರರು, ಪೋಷಕರು ಮತ್ತು ವಿದ್ಯಾರ್ಥಿಗಳು ಸಮಾರಂಭದಲ್ಲಿ ಉಪಸ್ಥಿತರಿದ್ದರು.

## ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಕೊಳ್ಳೇಗಾಲ

"ರಾಜೇಂದ್ರ ಶ್ರೀಗಳವರು ಮೌನಕ್ರಾಂತಿಯ ಮಹಂತರು" ಎಂದು ನಿವೃತ್ತ ಪ್ರಾಂಶುಪಾಲರಾದ ಪ್ರೊ. ಎ.ಜಿ. ಶಿವಕುಮಾರ್ ಅವರು ಹೇಳಿದರು.

**ಕೊಳ್ಳೇಗಾಲದ ಜೆಎಸ್‌ಎಸ್ ಕಾಲೇಜಿನಲ್ಲಿ** ಸಂಸ್ಥೆಗಳ ವತಿಯಿಂದ 2.9.2022ರಂದು ಆಯೋಜಿಸಿದ್ದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೆಯ ಜಯಂತಿ ಮಹೋತ್ಸವದಲ್ಲಿ ನುಡಿನಮನ ಸಲ್ಲಿಸುತ್ತ 1916ರಲ್ಲಿ ಜನ್ಮ ತಳೆದು 12ನೇ ವಯಸ್ಸಿನಲ್ಲಿ ಪೀಠಾಧಿಪತಿಗಳಾಗಿ ನಿಯೋಜನೆಗೊಂಡು ಶ್ರೀ ಮಂತ್ರಮಹರ್ಷಿಗಳ ಮಾರ್ಗದರ್ಶನದಲ್ಲಿ ಪಾಂಡಿತ್ಯ ಪಡೆಯಲು ಮೈಸೂರಿಗೆ ತೆರಳುವ ಶ್ರೀಗಳು ತಮ್ಮ ಸುತ್ತಲಿನ ಪರಿಸರದೆಡೆಗೆ ಗಮನ ಹರಿಸಿದಾಗ ವಿದ್ಯಾಕಾಂಕ್ಷೆ ಹೊಂದಿದ ಹಲವು ವಿದ್ಯಾರ್ಥಿಗಳು ಊಟ, ವಸತಿ ಸೌಲಭ್ಯದ ಕೊರತೆ ಎದುರಿಸುತ್ತಿರುವುದನ್ನು ಕಂಡು ಅವರಿಗೆ ಅನುಕೂಲ ಕಲ್ಪಿಸುವ ಆಲೋಚನೆಯನ್ನು ಕಾರ್ಯರೂಪಕ್ಕೆ ತರುತ್ತಾರೆ. ಹೆಚ್ಚಿನ ವಿದ್ಯಾಭ್ಯಾಸಕ್ಕೆ ಕಾಶಿಗೆ ತೆರಳುವ ಶ್ರೀಗಳು ಗೌರಿಶಂಕರ ಶ್ರೀಗಳವರ ಬಳಿ ತಮ್ಮ ಆಲೋಚನೆಯನ್ನು ಚರ್ಚಿಸಿ, ಮೈಸೂರಿಗೆ ಹಿಂದಿರುಗುತ್ತಾರೆ. ನಂತರ ಮೈಸೂರಿನಲ್ಲಿ ಉಚಿತ ವಿದ್ಯಾರ್ಥಿನಿಲಯವನ್ನು



ಕೊಳ್ಳೇಗಾಲದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಲ್ಲಿ ನಡೆದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೆಯ ಜಯಂತಿ ಮಹೋತ್ಸವದಲ್ಲಿ ಪ್ರೊ. ಎ.ಜಿ. ಶಿವಕುಮಾರ್‌ರವರು ನುಡಿನಮನ ಸಲ್ಲಿಸುತ್ತಿರುವುದು. ಚಿತ್ರದಲ್ಲಿ ಶ್ರೀ ಹೇಮೇಶ್, ಡಾ. ಎಂ. ಪ್ರಭು, ಶ್ರೀ ಮಹೇಶ್ ಹಾಗೂ ಶ್ರೀ ಮಹದೇವಸ್ವಾಮಿಯವರಿದ್ದಾರೆ

ಸ್ಥಾಪಿಸುತ್ತಾರೆ. 1942ರ ಹೊತ್ತಿಗೆ 300 ಜನ ವಿದ್ಯಾರ್ಥಿಗಳು ಆಶ್ರಯ ಪಡೆಯುತ್ತಾರೆ. ಕ್ಷಾಮ ಪರಿಸ್ಥಿತಿಯಲ್ಲೂ ವಿದ್ಯಾರ್ಥಿನಿಲಯವನ್ನು ನಿರ್ವಹಿಸಿದ ಹೆಗ್ಗಳಿಕೆ ಶ್ರೀಗಳವರದು ಎಂದು ತಿಳಿಸಿದರು.

ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಅಧ್ಯಯನ ಕೇಂದ್ರದ ನಿರ್ದೇಶಕರಾದ ಪ್ರೊ. ಆರ್. ಮಹೇಶ್ ಸಂಸ್ಥೆಯೊಂದಿಗೆ ತಮ್ಮ ಒಡನಾಟವನ್ನು ಹಂಚಿಕೊಳ್ಳುತ್ತಾ ಗ್ರಾಮೀಣ ಹೆಣ್ಣುಮಕ್ಕಳ ಬಗೆಗೆ ಸಂಸ್ಥೆಯ, ಶ್ರೀಗಳ ಕಾಳಜಿಯನ್ನು ಪ್ರಶಂಸನೀಯ. ಕಲೆ, ಸಂಸ್ಕೃತಿ ಮತ್ತು ಕ್ರೀಡೆಗಳಿಂದ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ. ಶೈಕ್ಷಣಿಕ ಚಟುವಟಿಕೆಗಳಿಗೆ ಇವೆಲ್ಲವೂ ಪೂರಕವಾದವು. ಚಾಮರಾಜನಗರ ಕಲೆ, ಸಂಸ್ಕೃತಿಯ ತವರೂರು. ನಮ್ಮದು ಸಾಂಸ್ಕೃತಿಕ ಶ್ರೀಮಂತಿಕೆಯುಳ್ಳ ದೇಶ. ವೈವಿಧ್ಯತೆಯ ಕಾರಣಕ್ಕೆ ಈ ದೇಶವನ್ನು ಗೌರವಿಸಬೇಕು. ಈ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ನೀವೆಲ್ಲರೂ ಧನ್ಯರೆಂದು ಶ್ಲಾಘಿಸಿದರು.

ಜಯಂತಿ ಸ್ಮರಣಾರ್ಥ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿನ ಒಳರೋಗಿಗಳಿಗೆ ಬ್ರೆಡ್ ಮತ್ತು ಹಣ್ಣು ವಿತರಿಸಲಾಯಿತು. ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಪ್ರಭು, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎನ್. ಮಹದೇವಸ್ವಾಮಿ, ನರ್ಸಿಂಗ್ ಶಾಲೆಯ ಪ್ರಾಂಶುಪಾಲರಾದ ಶ್ರೀ ಹೇಮೇಶ್ ಮೂರ್ತಿ ಉಪಸ್ಥಿತರಿದ್ದರು. ಶ್ರೀ ನಾಗಭೂಷಣ್ ಸ್ವಾಗತಿಸಿ, ಸಿಬ್ಬಂದಿವರ್ಗದವರಿಗೆ ಮತ್ತು ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಶ್ರೀಮತಿ ಮಹದೇವಮ್ಮನವರು ವಂದಿಸಿದರು. ಶ್ರೀಮತಿ ಜಯಶ್ರೀ ಕಾರ್ಯಕ್ರಮ ನಿರೂಪಿಸಿದರು.

□

ಕುಲಗೆಟ್ಟಡೆ ಕೆಡಬಹುದಲ್ಲದೆ ಛಲಗೆಡಬಾರದು

ಛಲಗೆಟ್ಟಡೆ ಕೆಡಬಹುದಲ್ಲದೆ ಭಕ್ತಿಯ ಅನು ಕೆಡಬಾರದು

ಭಕ್ತಿಯ ಅನು ಕೆಟ್ಟಡೆ ಕೆಡಬಹುದಲ್ಲದೆ ಆಯತ ಕೆಡಬಾರದು

ಆಯತ ಕೆಟ್ಟಡೆ ಕೆಡಬಹುದಲ್ಲದೆ ಸ್ವಾಯತ ಕೆಡಬಾರದು

ಎಲೆ ಕೂಡಲಸಂಗಮದೇವಯ್ಯಾ, ಮುನ್ನ ಮುಟ್ಟಿತ್ತೆ ಮುಟ್ಟಿತ್ತು

ಇನ್ನು ಮುಟ್ಟಿದೆನಾದಡೆ ನಿಮ್ಮ ರಾಣಿವಾಸದಾಣೆ

**ಬಸವಣ್ಣ**

## ಜೆಎಸ್‌ಎಸ್ ಸಂಸ್ಥೆಗಳು, ಸುತ್ತೂರು



**ಸುತ್ತೂರಿನ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ** ವತಿಯಿಂದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೇ ಜಯಂತಿ ಮಹೋತ್ಸವ ಹಾಗೂ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು.

ಮೈಸೂರಿನ ನಿವೃತ್ತ ಅಭಿಯಂತರರಾದ ಗುರುಕಾರ್ ಶ್ರೀ ಪುಟ್ಟಬುದ್ಧಿಯವರು ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜೀವನ, ಸಾಧನೆಯನ್ನು ತಮ್ಮ ವಿದ್ಯಾರ್ಥಿಜೀವನದ ಅನುಭವ ಹಾಗೂ ನಿದರ್ಶನಗಳ ಮೂಲಕ ವಿವರಿಸಿದರು. ಪೂಜ್ಯ ಶ್ರೀಗಳವರು ಮಾನವೀಯತೆ, ಮಾತೃಹೃದಯ, ಸೌಜನ್ಯ, ಸರಳತೆ, ದಯೆ, ಕ್ರಿಯಾಶೀಲತೆ, ಕಾರ್ಯಕ್ಷಮತೆ, ದೂರದೃಷ್ಟಿಯ ಮೂರ್ತಿರೂಪದಂತಿದ್ದರು. ಅವರು ಸರಳ ಜೀವನ, ಉನ್ನತ ಚಿಂತನೆಯನ್ನು ಮೈಗೂಡಿಸಿಕೊಂಡಿದ್ದರು. ಜಾತಿ ಭೇದಗಳಿಲ್ಲದೆ ಎಲ್ಲಾ ಬಡ ವಿದ್ಯಾರ್ಥಿಗಳ ಕುರಿತು ಅಪಾರವಾದ ಕಾಳಜಿಯನ್ನು ಹೊಂದಿದ್ದ ಶ್ರೀಗಳವರು ಗ್ರಾಮೀಣ ಭಾಗದಲ್ಲಿ ಉಚಿತ ಪ್ರಸಾದನಿಲಯಗಳನ್ನು ಸ್ಥಾಪಿಸಿದ ಕಾರಣದಿಂದಾಗಿ ಸಾವಿರಾರು ಬಡ ಕುಟುಂಬದ ವಿದ್ಯಾರ್ಥಿಗಳು ವಿದ್ಯಾವಂತರಾದರು ಎಂದರು.

ಮೈಸೂರಿನ ನಿವೃತ್ತ ಮುಖ್ಯ ಅಭಿಯಂತರರಾದ ಶ್ರೀ ಎಂ.ಸಿ. ಶಶಿಧರ್‌ರವರು ಮಾತನಾಡಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರವರು ಜಗತ್ತಿನ ಶ್ರೇಷ್ಠ ತತ್ತ್ವಜ್ಞಾನಿ ಮತ್ತು ದಾರ್ಶನಿಕರಾಗಿ ಭಾರತದ ಸಂಸ್ಕೃತಿ ಮತ್ತು ಧರ್ಮವನ್ನು ಜಗತ್ತಿಗೆ ಪರಿಚಯಿಸಿದವರು. ಅವರ ಜೀವನವೇ ನಮಗೆಲ್ಲ ದೊಡ್ಡ ಪಾಠವಾಗಿದೆ. ಭಾರತದ ಶಿಕ್ಷಕರೊಬ್ಬರು ಮೊದಲನೇ ಉಪರಾಷ್ಟ್ರಪತಿಯಾಗಿ, ಎರಡನೇ ರಾಷ್ಟ್ರಪತಿಯಾಗಿ ನೇಮಕಗೊಂಡು, ಶಿಕ್ಷಕರ ಅದಮ್ಯ ಶಕ್ತಿಯನ್ನು ಸಾರಿದರು. ರಾಷ್ಟ್ರಪತಿಯಾಗಿದ್ದ ಸಂದರ್ಭದಲ್ಲಿ ತಾವು ಪಡೆಯುತ್ತಿದ್ದ ವೇತನದ ಬಹು ಭಾಗವನ್ನು ಸರ್ಕಾರದ ಯೋಜನೆಗಳಿಗೆ ಬಳಸುತ್ತಿದ್ದರು ಎಂದು ಹೇಳಿದರು.

ಸಮ್ಮುಖ ವಹಿಸಿದ್ದ ಬರಡನಪುರ ಶ್ರೀ ಮಹಾಂತೇಶ್ವರ ಪಟ್ಟದ ಮಠದ ಷ.ಬ್ರ. ಶ್ರೀ ಪರಶಿವಮೂರ್ತಿ ಸ್ವಾಮಿಗಳವರು ರಾಜೇಂದ್ರ ಶ್ರೀಗಳವರು ಚಿಕ್ಕ ವಯಸ್ಸಿನಲ್ಲಿಯೇ ಮಠದ ಜವಾಬ್ದಾರಿಯನ್ನು ವಹಿಸಿಕೊಂಡರು. ಸಮಾಜಕ್ಕೆ ತಮ್ಮಿಂದ ಆಗಬೇಕಾದ ಸೇವೆಯನ್ನು ಮನಗಂಡು 'ಪರೋಪಕಾರಾರ್ಥಂ ಇದಂ ಶರೀರಂ' ಎನ್ನುವಂತೆ ಅವಿಶ್ರಾಂತರಾಗಿ ಕಾಯಕ ಮಾಡಿ ಸಮಾಜಕ್ಕೆ ಅನ್ನ, ಅಕ್ಷರ, ಆರೋಗ್ಯಸೇವೆಯನ್ನು ಒದಗಿಸಿ ತ್ರಿವಿಧದಾಸೋಹಿಗಳು ಎನಿಸಿಕೊಂಡರು. ಅವರ ಕರಕಮಲಸಂಜಾತರಾದ ಈಗಿನ ಶ್ರೀಗಳವರು ಅದನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ ಎಂದು ನುಡಿದರು.

ಸುತ್ತೂರಿನ ಜೆಎಸ್‌ಎಸ್ ಸಂಸ್ಥೆಗಳ ಆಡಳಿತಾಧಿಕಾರಿಗಳಾದ ಶ್ರೀ ಎಸ್.ಪಿ. ಉದಯಶಂಕರ್‌ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಜೆಎಸ್‌ಎಸ್ ಡಿ.ಇಲ್.ಇಡಿ. ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಎಂ.

ರಾಜಶೇಖರ್‌ರವರು ಪ್ರತಿಜ್ಞಾವಿಧಿ ಬೋಧಿಸಿದರು. ಸಂಸ್ಥೆಯ ವತಿಯಿಂದ ಮುಖ್ಯಸ್ಥರಿಗೆ ಹಾಗೂ ಶಿಕ್ಷಕರಿಗೆ ಆಯೋಜಿಸಿದ್ದ ಭಕ್ತಿಗೀತೆ ಹಾಗೂ ಭಾವಗೀತೆ ಸ್ಪರ್ಧೆ ಹಾಗೂ ವಿವಿಧ ಕ್ರೀಡಾಕೂಟಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಲಾಯಿತು.

ಇದೇ ಸಂದರ್ಭದಲ್ಲಿ ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿದ ಕು. ಸುಷ್ಮಿತಾ ಎಂ. ಯಡಹಳ್ಳಿ ಎಂಬ ವಿದ್ಯಾರ್ಥಿನಿಗೆ ಚಾಮರಾಜನಗರದ ದೀನಬಂಧು ಟ್ರಸ್ಟ್ ವತಿಯಿಂದ ನಗದು ಪುರಸ್ಕಾರವನ್ನು ನೀಡಲಾಯಿತು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಸಂಸ್ಥೆಗಳ ಮುಖ್ಯಸ್ಥರುಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕ, ಶ್ರೀ ಸಂಪತ್ತು, ಶ್ರೀ ವೀರಭದ್ರಯ್ಯ, ಡಾ. ಎಚ್.ಎಂ. ಮಹೇಶ್, ಶ್ರೀ ಎಸ್. ಶಿವಸ್ವಾಮಿ, ಶ್ರೀ ಜಿ. ಶಿವಮಲ್ಲು, ಶ್ರೀಮತಿ ಸಿ.ಪಿ. ನಿರ್ಮಲ, ಶ್ರೀ ಜಿ.ಎಂ. ಷಡಕ್ಷರಿ, ಶ್ರೀ ಮಹದೇವಪ್ರಸಾದ್, ಶ್ರೀ ಸುಶೀಲ, ಶ್ರೀ ಎಂ. ಷಡಕ್ಷರಿ, ಶ್ರೀಮತಿ ಸುನಂದಾ ಭೂಪಾಲಿ ಮೊದಲಾದವರು ಉಪಸ್ಥಿತರಿದ್ದರು. ಬಿ.ಇಡಿ. ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶ್ರೀ ಕೆ.ವಿ. ಯೋಗೀಶ್ ಸ್ವಾಗತಿಸಿದರು. ಶ್ರೀ ಜಿ.ಎನ್. ಮಂಜುನಾಥ್ ವಂದಿಸಿದರು. ಶ್ರೀಮತಿ ಅಂಬಿಕಾ ಕಾರ್ಯಕ್ರಮ ನಿರೂಪಿಸಿದರು.

## ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಕೋಣನಕುಂಟೆ



ವಚನ ದಿನ ಹಾಗೂ ಸಂಸ್ಥಾಪಕರ ದಿನಾಚರಣೆ ಅಂಗವಾಗಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುತ್ತಿರುವುದು

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಬೆಂಗಳೂರು ನಗರ ಜಿಲ್ಲಾ ದಕ್ಷಿಣ ಘಟಕದ ವತಿಯಿಂದ **ಕೋಣನಕುಂಟೆಯ ಜೆಎಸ್‌ಎಸ್ ಶಿಕ್ಷಣಸಂಸ್ಥೆಯಲ್ಲಿ** ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿ ಹಾಗೂ ವಚನ ದಿನಾಚರಣೆಯನ್ನು ಆಚರಿಸಲಾಯಿತು.

ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾದ ಶ್ರೀ ದಿಬ್ಬೂರು ಗಿರೀಶ್‌ರವರು ಮಾತನಾಡಿ ದಿವ್ಯಚೇತನರಾದ ರಾಜೇಂದ್ರ ಶ್ರೀಗಳು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿಗೆ, ಹಾಗೆಯೇ ಸಂಗೀತ, ಸೇವೆ, ಶಿಕ್ಷಣ, ಆರೋಗ್ಯ, ಅನಾಥಾಶ್ರಯ, ಸಂಸ್ಕೃತಿ, ಕಲೆ ಮುಂತಾದ ಇನ್ನೂ ಹತ್ತು ಹಲವು ಕ್ಷೇತ್ರಗಳಿಗೆ ಅಭೂತಪೂರ್ವ ಕೊಡುಗೆಗಳನ್ನು ಕೊಟ್ಟಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆಯುವಂತೆ ಭದ್ರ ಬುನಾದಿ ಹಾಕಿದ್ದಾರೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಪ್ರೌಢಶಾಲಾ ಮುಖ್ಯಸ್ಥರಾದ ಶ್ರೀಮತಿ ರೆಹನಾ ಬೇಗಂ ಸಮಾಜಕ್ಕೆ ರಾಜೇಂದ್ರ ಶ್ರೀಗಳವರು ನೀಡಿದ ಕೊಡುಗೆಗಳನ್ನು ಸ್ಮರಿಸಿದರು. ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಕುಮಾರಸ್ವಾಮಿ ರಾಜೇಂದ್ರ

ಮಹಾಸ್ವಾಮಿಗಳವರ ದಿವ್ಯದೃಷ್ಟಿಯು ನಿಜಕ್ಕೂ ಅವರ್ಣನೀಯವೂ, ಅನುಕರಣೀಯವೂ ಆದುದರಿಂದ ಅವರನ್ನು ದಿವ್ಯಚೇತನವೆಂದು ಭಾವಿಸಲಾಗುತ್ತಿದೆ ಎಂಬುದಾಗಿ ವಿವರಿಸಿದರು.

ವಚನಗಾಯನ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಶ್ರೀಮತಿ ಲಲಿತಮ್ಮ ಮತ್ತು ಶ್ರೀ ರೇವಣ್ಣಸಿದ್ದಯ್ಯ ದತ್ತಿ ವತಿಯಿಂದ ಬಹುಮಾನಗಳನ್ನು ನೀಡಿ ಪ್ರಶಸ್ತಿ ಪತ್ರಗಳನ್ನೂ ಪ್ರದಾನ ಮಾಡಲಾಯಿತು. ಶಿಕ್ಷಕರಾದ ಶ್ರೀ ಭೀಮಪ್ಪ ಬಳೋಬಾಳ್ ಮತ್ತು ಶ್ರೀ ಬಸವಣ್ಣನವರು ವಚನಗಾಯನ ಮಾಡಿದರು. ಶ್ರೀ ವಿಶ್ವನಾಥ್ ಸ್ವಾಗತಿಸಿದರು. ಶ್ರೀ ಶಿವಕುಮಾರ್ ವಂದಿಸಿದರು. ಶ್ರೀ ನಂಜುಂಡಸ್ವಾಮಿ ನಿರೂಪಿಸಿದರು.

## ಶಿಕ್ಷಕರ ದಿನಾಚರಣೆ

### ಮೈಸೂರಿನ ಜೆಎಸ್‌ಎಸ್ ಜನಶಿಕ್ಷಣ ಸಂಸ್ಥೆ, ಮೈಸೂರು



ಉತ್ತಮ ಸಂಪನ್ಮೂಲ ವ್ಯಕ್ತಿ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಲತಾ, ಶ್ರೀಮತಿ ಕೌಸರ್ ಜಮ್ಮು, ಶ್ರೀಮತಿ ಯೋಗೇಶ್ವರಿ, ಕು. ಧರ್ಮಕುಮಾರಿ, ಶ್ರೀ ಶಶೀಂದ್ರರವರುಗಳಿದ್ದಾರೆ

**ಮೈಸೂರಿನ ಜೆಎಸ್‌ಎಸ್ ಜನಶಿಕ್ಷಣ ಸಂಸ್ಥೆಯಲ್ಲಿ** ದಿನಾಂಕ 5.9.2022ರಂದು ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಿಕಟಪೂರ್ವ ನಿರ್ದೇಶಕರಾದ ಶ್ರೀ ಎ.ಪಿ. ರಮೇಶ್‌ರವರು ಮಾತನಾಡುತ್ತಾ ಸಮಾಜದಲ್ಲಿ ಜವಾಬ್ದಾರಿಯುತ ಹಾಗೂ ಸುಸಂಸ್ಕೃತ ವ್ಯಕ್ತಿಗಳನ್ನು ರೂಪಿಸುವಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದರು.

ನಿರ್ದೇಶಕರಾದ ಶ್ರೀ ಸಿ. ರಮೇಶ್‌ರವರು ಮಾತನಾಡುತ್ತಾ ಪ್ರಚಲಿತ ವಿದ್ಯಮಾನದಲ್ಲಿ ಬದುಕನ್ನು ರೂಪಿಸಿಕೊಳ್ಳುವಲ್ಲಿ ಜ್ಞಾನಾರ್ಜನೆ ಎಷ್ಟು ಮುಖ್ಯವೋ ಕೌಶಲ್ಯವೂ ಅಷ್ಟೇ ಮುಖ್ಯವಾಗಿದೆ. ಜನಶಿಕ್ಷಣ ಸಂಸ್ಥೆಯು ಅತ್ಯಂತ ಕುಗ್ರಾಮದ ಯುವಜನರಿಗೆ ತರಬೇತಿಗಳನ್ನು ಆಯೋಜಿಸಿ ಅವರ ಸ್ವಾವಲಂಬಿ ಬದುಕಿಗಾಗಿ ಕಾರ್ಯ ನಿರ್ವಹಿಸುತ್ತಿದೆ. ಸಂಸ್ಥೆಯ ವಿವಿಧ ಕೌಶಲ್ಯಗಳ ವೃತ್ತಿ ಬೋಧಕರ ಪರಿಶ್ರಮ ಅಗಾಧವಾಗಿದ್ದು, ಅವರ ಸೇವೆ ಸ್ಮರಣೀಯ ಎಂದರು.

ಇದೇ ಸಂದರ್ಭದಲ್ಲಿ ವೃತ್ತಿಬೋಧಕರಾಗಿ ಕಾರ್ಯ ನಿರ್ವಹಿಸುತ್ತಿರುವ 5 ಮಂದಿಗೆ "ಉತ್ತಮ ಶಿಕ್ಷಕ ಪ್ರಶಸ್ತಿ" ನೀಡಿ ಗೌರವಿಸಲಾಯಿತು. ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಜ್ಞಾನಮೂರ್ತಿಯವರು ಉಪಸ್ಥಿತರಿದ್ದರು. ಶ್ರೀ ಮಹದೇವಸ್ವಾಮಿ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಮಹೇಶ್‌ರವರು ವಂದಿಸಿದರು. ವಿವಿಧ ಕೌಶಲ್ಯಗಳ ವೃತ್ತಿಬೋಧಕರು, ಶಿಕ್ಷಣಾರ್ಥಿಗಳು ಹಾಗೂ ಸಿಬ್ಬಂದಿವರ್ಗದವರು ಭಾಗವಹಿಸಿದ್ದರು.

## ಸುತ್ತೂರಿನ ಕೃಷಿ ವಿಜ್ಞಾನ ಕೇಂದ್ರದಲ್ಲಿ ವಿಶ್ವ ತೆಂಗು ದಿನಾಚರಣೆ



ತೆಂಗು ಮೌಲ್ಯವರ್ಧನೆ ಕುರಿತು ಕೃಷಿಕರಿಗೆ ಮಾಹಿತಿ ನೀಡುತ್ತಿರುವುದು

**ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ,** ನಿರಂತರ ಸೈಂಟಿಫಿಕ್ ಸಲ್ಯೂಷನ್ಸ್ ಹಾಗು ಮೈಸೂರಿನ ಕೃಷಿ ತಂತ್ರಜ್ಞರ ಸಂಸ್ಥೆ ಇವುಗಳ ಸಂಯುಕ್ತಾಶ್ರಯದಲ್ಲಿ ವಿಶ್ವ ತೆಂಗು ದಿನಾಚರಣೆ ಪ್ರಯುಕ್ತ ತೆಂಗಿನ ಬೆಳೆಯಲ್ಲಿ ಸುಧಾರಿತ ಬೇಸಾಯ ಕ್ರಮಗಳು ಹಾಗು ಮೌಲ್ಯವರ್ಧನೆ ಕುರಿತ ತರಬೇತಿ ಕಾರ್ಯಕ್ರಮವನ್ನು ನಂಜನಗೂಡು ತಾಲ್ಲೂಕಿನ ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ದಿನಾಂಕ 2.9.2022ರಂದು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ತೆಂಗು ಅಭಿವೃದ್ಧಿ ಮಂಡಳಿಯ ನಿವೃತ್ತ ನಿರ್ದೇಶಕರಾದ ಶ್ರೀ ವಿಜಯಕುಮಾರ್ ಹಳ್ಳಿಕೇರಿಯವರು ಮಾತನಾಡಿ ಮೌಲ್ಯವರ್ಧನೆಯಲ್ಲಿ ಹೆಚ್ಚಿನ ಲಾಭವಿದ್ದು ರೈತರು ಮೌಲ್ಯವರ್ಧನೆಗೆ ಹೆಚ್ಚು ಒತ್ತು ನೀಡಬೇಕೆಂದು ತಿಳಿಸಿದರು.

ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಸಹಾಯಕ ಆಯುಕ್ತರಾದ ಶ್ರೀ ಕೆ.ಎನ್. ಚಂದ್ರಶೇಖರ್ ಮಾತನಾಡಿ ತೆಂಗಿನಲ್ಲಿ ಉತ್ತಮ ಇಳುವರಿ ಪಡೆಯಲು ಸಮಗ್ರ ಪೋಷಕಾಂಶ ನಿರ್ವಹಣೆ ಮಾಡಬೇಕೆಂದು ತಿಳಿಸಿದರು.

ಜಂಟಿ ಕೃಷಿ ನಿರ್ದೇಶಕರಾದ ಡಾ. ವಿಷಕಂಠ ಮಾತನಾಡಿ ಉತ್ತಮ ಆರೋಗ್ಯ ನಿರ್ವಹಣೆಗೆ ನೈಸರ್ಗಿಕ ಕೃಷಿಯೊಂದಿಗೆ ಬದುಕು ನಡೆಸುತ್ತಿರುವುದಾಗಿ ತಿಳಿಸಿದರು. ಪ್ರಗತಿಪರ ರೈತರಾದ ಶ್ರೀ ರೋಹಿತ್‌ರವರು ಮಾತನಾಡಿ ಮಣ್ಣಿನ ಗುಣಮಟ್ಟ ಉತ್ತಮಪಡಿಸಲು, ಹ್ಯೂಮಸ್ ಹೆಚ್ಚಿಸಲು ತೋಟದ ಸಾವಯವ ಪದಾರ್ಥಗಳನ್ನು ಹೇಗೆ ಮರುಬಳಕೆ ಮಾಡಬೇಕು ಹಾಗು ಜೈವಿಕ ಗೊಬ್ಬರದ ಬಳಕೆ ಕುರಿತು ತಿಳಿಸಿದರು. ಕೆವಿಕೆಯಲ್ಲಿ ಫ್ರೆಂಡ್ಸ್ ಆಫ್ ಕೋಕನಟ್ ತರಬೇತಿ ಪಡೆದ ರೈತರನ್ನು ಶ್ಲಾಘಿಸಿದರು.

ಹಿರಿಯ ವಿಜ್ಞಾನಿಗಳಾದ ಶ್ರೀ ಮಂಜುನಾಥ್ ಅಂಗಡಿ ಅಡಿಕೆಗೆ ಬೆಲೆ ಏರುತ್ತಿರುವುದರಿಂದ ತೆಂಗು ಬೆಳೆಗಾರರು ಕಡಿಮೆಯಾಗುತ್ತಿದ್ದಾರೆ. ಆದರೆ ತೆಂಗು ಕಲ್ಪವೃಕ್ಷವಾಗಿರುವುದರಿಂದ ಸಂಪೂರ್ಣ ಅಡಿಕೆಗೆ ಹೋಗದೆ ತೆಂಗನ್ನು ಜೊತೆಗೆ ಬೆಳೆಯಲು ಕರೆ ನೀಡಿದರು.

ಕಾರ್ಯಕ್ರಮದ ನಂತರ ಶ್ರೀ ವಿಜಯಕುಮಾರ್ ಹಳ್ಳಿಕೇರಿಯವರು ತೆಂಗಿನ ಮೌಲ್ಯವರ್ಧನೆ ಕುರಿತು ಮಾಹಿತಿಯನ್ನು ನೀಡಿದರು. ಡಾ. ಜಿ.ಎಂ. ವಿನಯ್‌ರವರು ತೆಂಗಿನ ಬೆಳೆಯಲ್ಲಿ ಸುಧಾರಿತ ಬೇಸಾಯ ಕ್ರಮಗಳ ಕುರಿತು ಹಾಗು ಶ್ರೀ ಜೆ.ಜಿ. ರಾಜಣ್ಣ ಮಣ್ಣು ನಿರ್ವಹಣೆ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ 60ಕ್ಕೂ ಹೆಚ್ಚು ರೈತರು, ಮೂಡಿಗೆರೆ ತೋಟಗಾರಿಕಾ ಕಾಲೇಜು ಮತ್ತು ನೋಯಿಡಾ ಕೃಷಿ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಐಸಿಎಆರ್ ಜೆಎಸ್‌ಎಸ್ ಕೆವಿಕೆಯ ಪ್ರಭಾರ ಹಿರಿಯ ವಿಜ್ಞಾನಿ ಹಾಗು ಮುಖ್ಯಸ್ಥರಾದ ಶ್ರೀಮತಿ ಎಚ್.ವಿ. ದಿವ್ಯಾ ಪಾಲ್ಗೊಂಡಿದ್ದ ರೈತರಿಗೆ ಸ್ವಾಗತ ಕೋರಿದರು. ಡಾ. ಜಿ.ಎಂ. ವಿನಯ್ ಕಾರ್ಯಕ್ರಮದ ಪರಿಚಯ ಮಾಡಿದರು. ಶ್ರೀ ಜೆ.ಜಿ. ರಾಜಣ್ಣನವರು ವಂದಿಸಿದರು. ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶ್ರೀಮತಿ ನೇತ್ರಾವತಿ ಎತ್ತಿನಮನಿಯವರು ನಿರೂಪಿಸಿದರು.

## ಶ್ರೀಗಂಧ ಬೆಳೆಯ ಸಮಗ್ರ ನಿರ್ವಹಣೆ ಮತ್ತು ಶ್ರೀಗಂಧ ಬೆಳೆಯಾಧಾರಿತ ಕೃಷಿ ಅರಣ್ಯ ಪದ್ಧತಿಗಳ ಬಗ್ಗೆ ತರಬೇತಿ



**ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ**ದ ವತಿಯಿಂದ ಬೆಂಗಳೂರಿನ ಮರ ವಿಜ್ಞಾನ ಕೇಂದ್ರದ ಸಹಯೋಗದಲ್ಲಿ ಶ್ರೀಗಂಧ ಬೆಳೆಯ ಸಮಗ್ರ ನಿರ್ವಹಣೆ ಮತ್ತು ಶ್ರೀಗಂಧ ಬೆಳೆಯಧಾರಿತ ಕೃಷಿ ಅರಣ್ಯ ಪದ್ಧತಿಗಳ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಮುಖ್ಯ ಅತಿಥಿಗಳಾದ ಡಾ. ಬಿ.ಎನ್. ದಿವಾಕರ್‌ರವರು ಮರ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯ ಕಾರ್ಯಕ್ರಮಗಳು ಹಾಗೂ ಸಂಸ್ಥೆಯು ಶ್ರೀಗಂಧ ಬೆಳೆಯಲು ರೈತರಿಗೆ ಉತ್ತೇಜಿಸಲು ಹಮ್ಮಿಕೊಂಡಿರುವ ಕಾರ್ಯಗಳ ಬಗ್ಗೆ ವಿವರವಾದ ಮಾಹಿತಿ ನೀಡಿದರು. ಅರಣ್ಯ ಸಂರಕ್ಷಣಾಧಿಕಾರಿ ಶ್ರೀ ಶ್ರೀಧರ್ ಅವರು ಮಾತನಾಡಿ ಅರಣ್ಯ ಇಲಾಖೆಯು ಸಸಿಗಳನ್ನು ಬೆಳೆಸುವ ವಿಧಾನಗಳ ಬಗ್ಗೆ ಮಾಹಿತಿ ನೀಡಿದರು. ಅರಣ್ಯ ಇಲಾಖೆಯಿಂದ ರೈತರಿಗೆ ದೊರೆಯುವ ಮಾಹಿತಿಗಳು ಮತ್ತು ಸವಲತ್ತುಗಳ ಬಗ್ಗೆ ತಿಳಿಸಿದರು.

ಆಕಾಶವಾಣಿಯ ಕಾರ್ಯಕ್ರಮ ನಿರ್ವಾಹಕರಾದ ಶ್ರೀ ಸುಬ್ರಹ್ಮಣ್ಯರವರು ಮಾತನಾಡುತ್ತಾ ರೈತರು ಆರ್ಥಿಕವಾಗಿ, ಸಾಮಾಜಿಕವಾಗಿ ಮುಂದುವರಿಯಲು ವಾಣಿಜ್ಯ ಬೆಳೆಗಳನ್ನು ಬೆಳೆಯಬೇಕು. ಅರಣ್ಯ ಮರಗಳನ್ನು ಬೆಳೆಸಬೇಕು. ಅದರಲ್ಲೂ ಶ್ರೀಗಂಧ ಬೆಳೆದು ರೈತರು ಆರ್ಥಿಕವಾಗಿ ಸಬಲರಾಗಬೇಕೆಂದು ಕರೆ ನೀಡಿದರು.

ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ತೋಟಗಾರಿಕೆ ನಿರ್ದೇಶಕರಾದ ಶ್ರೀ ಎನ್.ಎಂ. ಶಿವಶಂಕರಪ್ಪನವರು ಮಾತನಾಡಿ ಅರಣ್ಯ ಇಲಾಖೆಯು ರೈತರಿಗೆ ಬೆಳೆಯಲು ಸಹಾಯಧನ ನೀಡುವುದರ ಜೊತೆಗೆ ತಾಂತ್ರಿಕ ಮಾಹಿತಿಯನ್ನು ನೀಡುತ್ತಿದೆ. ಶ್ರೀಗಂಧ ಬೆಳೆಯನ್ನು ಬೆಳೆದರೆ ಒಳ್ಳೆಯ ಬೆಲೆ ಇರುತ್ತದೆ. ರೈತರಿಗೆ ಬ್ಯಾಂಕ್‌ನಿಂದ ದೊರೆಯುವ ಸವಲತ್ತುಗಳ ಬಗ್ಗೆ ತಿಳಿದುಕೊಂಡು ಸಾಲ ಸೌಲಭ್ಯ ಪಡೆದು ಮುಂದಿನ ದಿನಗಳಲ್ಲಿ ಶ್ರೀಗಂಧದ ಕೃಷಿಯನ್ನು ಅಧಿಕಗೊಳಿಸಲು ರೈತರಿಗೆ ಕರೆನೀಡಿದರು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಬೆಂಗಳೂರಿನ ಮರ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯ ವಿಜ್ಞಾನಿಯಾದ ಡಾ. ದೊರೈ ಶ್ರೀಗಂಧ ಸಸಿಗಳನ್ನು ಬೆಳೆಸಿ ನರ್ಸರಿ ಮಾಡಿ ಅವುಗಳಿಂದ ಆದಾಯ ಗಳಿಸಬಹುದೆಂದು ಮಾಹಿತಿ ನೀಡಿದರು. ನಿವೃತ್ತ ಬ್ಯಾಂಕ್ ಅಧಿಕಾರಿಗಳಾದ ಶ್ರೀ ವೆಂಕಟೇಶ್‌ರವರು ರೈತರಿಗೆ ಬ್ಯಾಂಕ್‌ನಿಂದ ಶ್ರೀಗಂಧ ಬೆಳೆಯಲು ಒಂದು ಹೆಕ್ಟೇರ್‌ಗೆ ಒಂದು ಲಕ್ಷ ಹನ್ನೆರಡು ಸಾವಿರ ರೂ.ಗಳ ಸಹಾಯ ದೊರೆಯುತ್ತದೆ ಎಂದರು. ಶ್ರೀಗಂಧ ಬೆಳೆ, ಬೇಲಿ, ಹನಿ ನೀರಾವರಿ ಹಾಗೂ ಇತರೆ ಸವಲತ್ತುಗಳ ಕುರಿತು ಮಾಹಿತಿ ನೀಡಿದರು.

ಬೆಂಗಳೂರಿನ ಮರ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯ ವಿಜ್ಞಾನಿಗಳಾದ ಡಾ. ಬಿ.ಎನ್. ದಿವಾಕರ್‌ರವರು ಶ್ರೀಗಂಧದ ಇತಿಹಾಸ, ಅದರ ಉಪಯೋಗಗಳು,

ಶ್ರೀಗಂಧದ ಬೆಳೆಯ ಸಮಗ್ರ ನಿರ್ವಹಣೆ ಹಾಗೂ ಅದರ ಆರ್ಥಿಕತೆ ಬಗ್ಗೆ ಮಾಹಿತಿ ನೀಡಿದರು. ಟಿ. ನರಸೀಪುರ ತಾಲೂಕಿನ ಅರಣ್ಯ ಅಧಿಕಾರಿ ಶ್ರೀ ಟಿ.ಡಿ. ರಾಜೇಶ್ ಅರಣ್ಯ ಇಲಾಖೆಯ ಕಾರ್ಯಕ್ರಮಗಳು, ಶ್ರೀಗಂಧ ಬೆಳೆಗೆ ಇಲಾಖೆಯಿಂದ ದೊರೆಯುವ ಸವಲತ್ತುಗಳು, ಒಳ್ಳೆಯ ಶ್ರೀಗಂಧ ಸಸಿಗಳ ಲಭ್ಯತೆ ಬಗ್ಗೆ ಮಾಹಿತಿ ನೀಡಿದರು.

ಶ್ರೀಮತಿ ಎಚ್.ವಿ. ದಿವ್ಯಾರವರು ಸ್ವಾಗತಿಸಿದರು. ಡಾ. ಯು.ಎಂ. ರಕ್ಷಿತ್ ರಾಜ್‌ರವರು ವಂದಿಸಿದರು. ಶ್ರೀಮತಿ ನೇತ್ರಾವತಿ ಎತ್ತಿನಮನಿಯವರು ಕಾರ್ಯಕ್ರಮದ ನಿರೂಪಣೆ ಮಾಡಿದರು. ಡಾ. ಜಿ.ಎಂ. ವಿನಯ್‌ರವರು ಕಾರ್ಯಕ್ರಮದ ಪರಿಚಯ ಮಾಡಿಕೊಟ್ಟರು. ಕಾರ್ಯಕ್ರಮದಲ್ಲಿ 100ಕ್ಕೂ ಹೆಚ್ಚು ರೈತರು ಭಾಗವಹಿಸಿದ್ದರು. ಕಾರ್ಯಕ್ರಮದ ಕೊನೆಯಲ್ಲಿ ಅರಣ್ಯ ಇಲಾಖೆಯ ಸಹಯೋಗದೊಂದಿಗೆ ತರಬೇತಿ ಕಾರ್ಯಕ್ರಮಕ್ಕೆ ಬಂದ ಎಲ್ಲ ರೈತರಿಗೂ ಉಚಿತವಾಗಿ ಶ್ರೀಗಂಧದ ಗಿಡವನ್ನು ವಿತರಿಸಲಾಯಿತು.

## ಮಾದಕ ವ್ಯಸನಗಳ ಬಗ್ಗೆ ಅರಿವು



ನಂಜನಗೂಡಿನ ಜೆಎಸ್‌ಎಸ್ ಪದವಿಪೂರ್ವ ಕಾಲೇಜು ಮತ್ತು ಮೈಸೂರಿನ ಜೆಎಸ್‌ಎಸ್ ಆಪ್ತ ಸಮಾಲೋಚನಾ ಕೇಂದ್ರಗಳ ಸಂಯುಕ್ತಾಶ್ರಯದಲ್ಲಿ ಮಾದಕ ವ್ಯಸನಗಳ ಬಗ್ಗೆ ಅರಿವು ಕಾರ್ಯಕ್ರಮವನ್ನು ಚುಂಚನಹಳ್ಳಿಯ ಶ್ರೀ ಚನ್ನಬಸವ ಮಹಾಸ್ವಾಮಿಗಳವರ ಸಮ್ಮುಖದಲ್ಲಿ ಉದ್ಘಾಟಿಸುತ್ತಿರುವುದು

**ನಂಜನಗೂಡಿನ ಜೆಎಸ್‌ಎಸ್ ಪದವಿಪೂರ್ವ ಕಾಲೇಜು ಮತ್ತು ಮೈಸೂರಿನ ಜೆಎಸ್‌ಎಸ್ ಆಪ್ತ ಸಮಾಲೋಚನಾ ಕೇಂದ್ರಗಳ** ಸಂಯುಕ್ತಾಶ್ರಯದಲ್ಲಿ ದಿನಾಂಕ 3.9.2022ರಂದು ಮಾದಕ ವ್ಯಸನಗಳ ಬಗ್ಗೆ ಅರಿವು ಕಾರ್ಯಕ್ರಮವನ್ನು ಚುಂಚನಹಳ್ಳಿಯ ಶ್ರೀ ಚನ್ನಬಸವ ಮಹಾಸ್ವಾಮಿಗಳವರ ಸಮ್ಮುಖದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ನಂಜನಗೂಡಿನ ಪ್ರಥಮ ದರ್ಜೆ ಗುತ್ತಿಗೆದಾರರು ಹಾಗೂ ಜೆಎಸ್‌ಎಸ್ ಕಾಲೇಜಿನ ಗೌರ್ನಿಂಗ್ ಕೌನ್ಸಿಲ್ ಸದಸ್ಯರಾದ ಶ್ರೀ ಯು.ಎನ್. ಪದ್ಮನಾಭರಾವ್‌ರವರು ಮಾತನಾಡುತ್ತಾ ಮಹಾತ್ಮ ಗಾಂಧೀಜಿಯವರು ಮದ್ಯಪಾನ ನಿಷೇಧಿಸಬೇಕೆಂದಿದ್ದರು. ಆದರೆ ಸರ್ಕಾರಗಳು ಆದಾಯದ ನಿರೀಕ್ಷೆಯಿಂದ ಮದ್ಯಪಾನ ನಿಷೇಧಿಸದಿರುವುದು ದುರದೃಷ್ಟಕರ. ಯಾರೂ ಕುಡಿತದ ಚಟಕ್ಕೆ ಬಲಿಯಾಗಬಾರದು ಎಂದು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಮನೋರೋಗ ತಜ್ಞರಾದ ಡಾ. ಮೇಘಾ ಸದಾಶಿವರವರು ಮಾತನಾಡುತ್ತಾ

ಮಾದಕವಸ್ತುಗಳ ಸೇವನೆಯಿಂದ ಉಂಟಾಗುವ ದುಷ್ಪರಿಣಾಮಗಳ ಕುರಿತು ವಿವರಿಸಿ ಅವುಗಳಿಂದ ದೂರವಿರಬೇಕೆಂದು ಕರೆ ನೀಡಿದರು. ಮತ್ತೋರ್ವ ಮನೋವೈದ್ಯರಾದ ಡಾ. ಪ್ರದೀಪ್ ಶೆಟ್ಟಿಯವರು ಕುತೂಹಲಕ್ಕಾಗಿ ಶುರುವಾಗುವ ಮಾದಕವಸ್ತುಗಳ ಸೇವನೆ ಹೇಗೆ ಚಟವಾಗಿ ಪರಿಣಮಿಸಿ ಮನುಷ್ಯನ ಬದುಕನ್ನು ಹಾಳುಮಾಡುತ್ತದೆ ಎಂಬುದನ್ನು ನೈಜ ಸಂಗತಿಗಳ ಮೂಲಕ ತಿಳಿಸಿದರು.

ವಕೀಲರಾದ ಶ್ರೀ ಬಿ. ನಂಜುಂಡಸ್ವಾಮಿಯವರು ಮಾತನಾಡಿ ವಿದ್ಯಾರ್ಥಿಗಳು ಯಾವಾಗಲೂ ಕ್ರಿಯಾಶೀಲರಾಗಿದ್ದು ಒಳ್ಳೆಯ ಹವ್ಯಾಸಗಳನ್ನು ರೂಢಿಸಿಕೊಂಡು ಸಾಧನೆ ಮಾಡಬೇಕು. ಮನಸ್ಸನ್ನು ಒಳ್ಳೆಯದರ ಕಡೆ ಕೇಂದ್ರೀಕರಿಸಿಕೊಂಡು ವ್ಯಕ್ತಿತ್ವ ರೂಪಿಸಿಕೊಳ್ಳಬೇಕೆಂದು ಹಿತ ನುಡಿದರು.

ಮೈಸೂರಿನ ಊಟಿ ರಸ್ತೆ ಜೆಎಸ್‌ಎಸ್ ಕಾಲೇಜಿನ ಎಂಎಸ್‌ಡಬ್ಲ್ಯೂ ವಿಭಾಗದ ಮುಖ್ಯಸ್ಥರಾದ ಡಾ. ಎಂ.ಪಿ. ಸೋಮಶೇಖರ್ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಆಶಯದಂತೆ ಮದ್ಯವ್ಯಸನಿಗಳ ಜೀವನವನ್ನು ಸುಧಾರಿಸಲು ಶಿಬಿರಗಳನ್ನು ಆಯೋಜಿಸಿ ಅವರನ್ನು ಚಟದಿಂದ ಮುಕ್ತಗೊಳಿಸಿ ಉತ್ತಮ ಜೀವನ ನಡೆಸಲು ಪ್ರೇರೇಪಿಸಲಾಗುತ್ತಿದೆ ಎಂದರು.

ಪ್ರಾಂಶುಪಾಲರುಗಳಾದ ಶ್ರೀ ಕೆ.ಎನ್. ಶಿವಕುಮಾರ್, ಪ್ರೊ. ಎಚ್.ಎಸ್. ನಾಗೇಂದ್ರಕುಮಾರ್ ಮಾತನಾಡಿದರು. ಕಾಲೇಜಿನ ಸಿಬ್ಬಂದಿವರ್ಗ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಕು. ಅಮೂಲ್ಯ ಮತ್ತು ತಂಡದವರು ಪ್ರಾರ್ಥನೆ ಮಾಡಿದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಸಾಮಾನ್ಯ ಅಭಿವೃದ್ಧಿ ವಿಭಾಗದ ಯೋಜನಾ ಸಂಯೋಜನಾಧಿಕಾರಿಯಾದ ಶ್ರೀ ಎಸ್. ಬಸವರಾಜು ವಂದಿಸಿದರು. ಇಂಗ್ಲಿಷ್ ಉಪನ್ಯಾಸಕರಾದ ಶ್ರೀ ಎಂ. ಸುರೇಶ್ ಕಾರ್ಯಕ್ರಮ ನಿರೂಪಿಸಿದರು.

## ಸ್ವಯಂಪ್ರೇರಿತ ರಕ್ತದಾನ ಶಿಬಿರ



ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜಿನಲ್ಲಿ ನಡೆದ ಸ್ವಯಂಪ್ರೇರಿತ ರಕ್ತದಾನ ಶಿಬಿರ

ಪರಮಪೂಜ್ಯ ಜಗದ್ಗುರು ರಾಜಗುರುತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೆಯ ಜಯಂತಿ ಮಹೋತ್ಸವದ ಅಂಗವಾಗಿ **ಜೆಎಸ್‌ಎಸ್. ಆಯುರ್ವೇದ ಮಹಾವಿದ್ಯಾಲಯ ಮತ್ತು ಆಸ್ಪತ್ರೆ,** ರೋಗನಿದಾನ ಸ್ನಾತಕೋತ್ತರ ವಿಭಾಗ, ಎನ್‌ಎಸ್‌ಎಸ್, ಯೂತ್ ರೆಡ್‌ಕ್ರಾಸ್ ವಿಭಾಗಗಳು, ಜೆಎಸ್‌ಎಸ್ ಆಸ್ಪತ್ರೆಯ ರಕ್ತನಿಧಿ ವಿಭಾಗದ ಸಹಯೋಗದೊಂದಿಗೆ ದಿನಾಂಕ 13.9.2022ರಂದು ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿತ್ತು.

ಧನ್ವಂತರಿ ಸ್ತವನದೊಂದಿಗೆ ಕಾರ್ಯಕ್ರಮವು ಪ್ರಾರಂಭವಾಯಿತು. ಜೆಎಸ್‌ಎಸ್ ಆಸ್ಪತ್ರೆಯ ರಕ್ತನಿಧಿ ವಿಭಾಗದ ಪ್ರಾಧ್ಯಾಪಕರಾದ ಡಾ. ಪಲ್ಲವಿಯವರು ಮಾತನಾಡುತ್ತಾ, ರಕ್ತದಾನದ ಮಹತ್ವ, ಸ್ವಯಂಪ್ರೇರಿತ ರಕ್ತದಾನದಲ್ಲಿ ವಿದ್ಯಾರ್ಥಿಗಳ ಹಾಗೂ ಆರೋಗ್ಯವಂತ ನಾಗರಿಕರ ಜವಾಬ್ದಾರಿ ಕುರಿತು ತಿಳಿಸಿದರು. ಪ್ರಾಧ್ಯಾಪಕರು, ಹಿರಿಯ ತಜ್ಞವೈದ್ಯರಾದ ಡಾ. ಬಿ. ಗುರುಬಸವರಾಜರವರು ಮಾತನಾಡುತ್ತಾ, ಪ್ರತಿಯೊಬ್ಬ ನಾಗರಿಕನನ್ನು ದಾನಿಗಳನ್ನಾಗಿ ಮಾಡಿರುವ ರಕ್ತದಾನ ಶ್ರೇಷ್ಠದಾನ ಎಂದು ತಿಳಿಸಿ, ಎಲ್ಲಾ ಅಧ್ಯಾಪಕರು, ವಿದ್ಯಾರ್ಥಿಗಳು ರಕ್ತದಾನ ಮಾಡುವಂತೆ ಪ್ರೋತ್ಸಾಹಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಪ್ರಾಂಶುಪಾಲರಾದ ಡಾ. ಸರ್ಬೇಸ್ವರ್ ಕರ್‌ರವರು ಮಹಾಸ್ವಾಮಿಗಳ ಆದರ್ಶ ತತ್ವಗಳಾದ ಅಕ್ಷರ, ಆರೋಗ್ಯ, ಅನ್ನದಾಸೋಹಗಳಲ್ಲಿ ರಕ್ತದಾನದ ಸ್ಥಾನ ಮತ್ತು ವಿಶಿಷ್ಟತೆಯನ್ನು ತಿಳಿಸಿದರು. ಡಾ. ಪಲ್ಲವಿ ಮತ್ತು ತಂಡದವರಿಗೆ ಮತ್ತು ಶಿಬಿರದ ಯಶಸ್ಸಿಗೆ ಕಾರಣರಾದ ಹಾಗೂ ಎಲ್ಲಾ ದಾನಿಗಳನ್ನು ಅಭಿನಂದಿಸಿದರು.

ಪ್ರಾಧ್ಯಾಪಕರಾದ ಡಾ. ಎಂ. ಸುಭಾಷ್ ಚಂದ್ರ ಬೋಸ್ ಕಾರ್ಯಕ್ರಮದ ನಿರೂಪಣೆ ಮಾಡಿದರು. ಡಾ. ಶಶಿಬಿಂದು, ಡಾ. ಆರ್. ಸಂತೋಷ್, ಎಲ್ಲಾ ಅಧ್ಯಾಪಕ ವೈದ್ಯ ವೃಂದದವರು, ಆಸ್ಪತ್ರೆ ಹಾಗೂ ಕಾಲೇಜಿನ ಆಡಳಿತ ವಿಭಾಗದ ಅಧಿಕಾರಿಗಳು, ವಿದ್ಯಾರ್ಥಿಗಳು ಹಾಗೂ ಬೋಧಕೇತರ ಸಿಬ್ಬಂದಿಗಳು ಹಾಜರಿದ್ದರು. 200 ದಾನಿಗಳ ತಪಾಸಣೆ ನಡೆಸಿ, 50 ಯೂನಿಟ್ ರಕ್ತವನ್ನು ಸಂಗ್ರಹಿಸಲಾಯಿತು.

## ಉತ್ತನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಉಚಿತ ಆರೋಗ್ಯ ತಪಾಸಣೆ



ವಿದ್ಯಾರ್ಥಿಗಳಿಗೆ ಆರೋಗ್ಯ ತಪಾಸಣೆ ನಡೆಸುತ್ತಿರುವುದು

ರಾಷ್ಟ್ರೀಯ ಪೌಷ್ಟಿಕ ಮಾಸದ ಅಂಗವಾಗಿ **ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆಯಲ್ಲಿ** ಸ್ವಸ್ಥವೃತ್ತ ಮತ್ತು ಬಾಲರೋಗ ವಿಭಾಗವು ಎನ್‌ಎಸ್‌ಎಸ್ ವಿಭಾಗದ ಸಹಯೋಗದೊಂದಿಗೆ ಮೈಸೂರಿನ ಉತ್ತನಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಉಚಿತ ವೈದ್ಯಕೀಯ ಆರೋಗ್ಯ ತಪಾಸಣಾ ಶಿಬಿರವನ್ನು

ದಿನಾಂಕ 1.9.2022 ಮತ್ತು 2.9.2022ರಂದು ಆಯೋಜಿಸಲಾಗಿತ್ತು

ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರಾದ ಪಿ. ಸರ್ವಮಂಗಲ ಮತ್ತು ಸ್ವಸ್ಥವೃತ್ತ ವಿಭಾಗದ ಪ್ರಾಧ್ಯಾಪಕರಾದ ಡಾ. ಪಿ. ಸುಧಾಕರ ರೆಡ್ಡಿಯವರು ಪೋಷಣೆಯ ಬಗ್ಗೆ ಉಪನ್ಯಾಸ ನೀಡಿದರು. ನಂತರ ವೈದ್ಯಕೀಯ ಆರೋಗ್ಯ ತಪಾಸಣಾ ಶಿಬಿರವನ್ನು ನಡೆಸಲಾಯಿತು. ಶಾಲೆಯ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ವಿಭಾಗದ 102 ವಿದ್ಯಾರ್ಥಿಗಳು ಶಿಬಿರದ ಪ್ರಯೋಜನ ಪಡೆದುಕೊಂಡರು. ಶಿಬಿರದಲ್ಲಿ ಆಯುರ್ವೇದ ಕಾಲೇಜಿನ ವೈದ್ಯಕೀಯ ಸಿಬ್ಬಂದಿ, ಸ್ನಾತಕೋತ್ತರ ಮತ್ತು ಕಲಿಕಾ ವೈದ್ಯರು ಭಾಗವಹಿಸಿದ್ದರು.

## ವಿಶೇಷ ಉಪನ್ಯಾಸ




ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಮಕ್ಕಳ ಚಿಕಿತ್ಸಾ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಚೇತಕ್‌ರವರು ಉಪನ್ಯಾಸವನ್ನು ನೀಡುತ್ತಿರುವುದು.

**ಮೈಸೂರಿನ ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್** ವತಿಯಿಂದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ದಿನಾಂಕ 23.8.2022 ರಂದು ಪ್ರಸ್ತುತ ಸನ್ನಿವೇಶದ ಚುಚ್ಚುಮದ್ದಿನ ಬಗ್ಗೆ ಉಪನ್ಯಾಸವನ್ನು ಆಯೋಜಿಸಲಾಗಿತ್ತು. ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಮಕ್ಕಳ ಚಿಕಿತ್ಸಾ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಚೇತಕ್‌ರವರು ಮಾತನಾಡಿ ಚುಚ್ಚುಮದ್ದಿನ ಇತಿಹಾಸವನ್ನು ಸಂಕ್ಷಿಪ್ತವಾಗಿ ವಿವರಿಸುತ್ತಾ, ಪ್ರಸ್ತುತ ಸನ್ನಿವೇಶದಲ್ಲಿ ಉಪಯೋಗಿಸುತ್ತಿರುವ ಚುಚ್ಚುಮದ್ದುಗಳಾದ ಬಿಸಿಜಿ, ಪೆಂಟಾವ್ಯಾಕ್, ನ್ಯೂಮೊಕಾಕಲ್, ಟೈಫಾಯಿಡ್, ಎಚ್‌ಪಿಎಲ್ ಮೊದಲಾದ ಚುಚ್ಚುಮದ್ದುಗಳ ಬಗ್ಗೆ ವಿವರಿಸಿದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಶ್ರೀಮತಿ ಡಿ.ಎನ್. ರೇಣುಕಾದೇವಿ, ಬೋಧಕರಾದ ಶ್ರೀಮತಿ ಕೆ.ವಿ. ಮಂಜುಳ ಮತ್ತು ಶ್ರೀಮತಿ ವಿ. ಸುಕನ್ಯ ಹಾಗು ದ್ವಿತೀಯ ವರ್ಷದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಸಾಧನೆ

### ಜೆಎಸ್‌ಎಸ್ ಪ್ರೌಢಶಾಲೆ, ಸರಸ್ವತಿಪುರಂ, ಮೈಸೂರು



ಕು. ಯು. ಸುಪ್ರಿಯ

**ಮೈಸೂರಿನ ಸರಸ್ವತಿ ಪುರಂನಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ** 10ನೇ ತರಗತಿಯ ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡುತ್ತಿರುವ ಕು. ಯು. ಸುಪ್ರಿಯ ಎಂಬ ವಿದ್ಯಾರ್ಥಿನಿಯು ಆಲ್ ಇಂಡಿಯಾ ಸ್ಪೋರ್ಟ್ಸ್ ಕೌನ್ಸಿಲ್ ಆಫ್ ದಿ ಡೆಫ್ ವತಿಯಿಂದ ಗುಜರಾತ್‌ನಲ್ಲಿ ದಿನಾಂಕ 27.6.2022 ರಿಂದ 31.6.2022ರವರೆಗೆ ನಡೆದ ನ್ಯಾಷನಲ್ ಚೆಸ್ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ಭಾಗವಹಿಸಿ ದ್ವಿತೀಯ ಸ್ಥಾನ ಪಡೆದು, ಪೋಲೆಂಡ್‌ನಲ್ಲಿ ನಡೆಯುವ ಅಂತಾರಾಷ್ಟ್ರೀಯ ಮಟ್ಟದ ಚೆಸ್ ಸ್ಪರ್ಧೆಗೆ ಆಯ್ಕೆಯಾಗಿರುತ್ತಾರೆ.


## ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ




ಗುಂಡು ಎಸೆತ ಸ್ಪರ್ಧೆಯಲ್ಲಿ ವಿಜೇತರಾದ ಕು. ವಿನುತ ಬೆಳ್ಳಿ ಪದಕವನ್ನು ಸ್ವೀಕರಿಸುತ್ತಿರುವುದು

ಚಾಮರಾಜನಗರ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಶ್ರಯದಲ್ಲಿ ದಿನಾಂಕ 7.9.2022ರಂದು ನಡೆದ 2022–23ರ ಜಿಲ್ಲಾ ದಸರಾ ಕ್ರೀಡಾಕೂಟದಲ್ಲಿ **ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನ** ವಿದ್ಯಾರ್ಥಿನಿ ಕು. ವಿನುತ ಗುಂಡು ಎಸೆತ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಪಡೆದು ವಿಭಾಗ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ ಹಾಗೂ ಕು. ಕುಸುಮ ಜಾವಲಿನ್ ಸ್ಪರ್ಧೆಯಲ್ಲಿ ತೃತೀಯ ಬಹುಮಾನ ಪಡೆದಿರುತ್ತಾರೆ. ಈ ಇಬ್ಬರು ವಿದ್ಯಾರ್ಥಿನಿಯರನ್ನು ಪ್ರಾಂಶುಪಾಲರಾದ ಡಾ. ಎಂ. ಪ್ರಭು ಹಾಗೂ ಕ್ರೀಡಾ ಸಂಚಾಲಕರಾದ ಶ್ರೀ ಶ್ರೀಧರ್ ಮತ್ತು ಅಧ್ಯಾಪಕವರ್ಗದವರು ಅಭಿನಂದಿಸಿದ್ದಾರೆ.

## ಸಂತೆಮರಳ್ಳಿಯ ಜೆಎಸ್‌ಎಸ್ ಪ್ರೌಢಶಾಲಾ ಶಿಕ್ಷಕರಿಗೆ ಉತ್ತಮ ಶಿಕ್ಷಕ–2022 ಪ್ರಶಸ್ತಿ



ಶ್ರೀ ಜಿ.ಆರ್. ಶೇಖರ್

